

ಕಾಶ್ಮೀರ ವೈಭವವು ದೂಳು ಹಿಡಿದು ಕುಳಿತಿತ್ತು. ಇಡೀ ಶ್ರೀನಗರವನ್ನು ಕುಸುರಿಯಲ್ಲಿ ನೇಯ್ದ ಶಾಲು, ಮುರಿದ ಶಿವ, ವಿಷ್ಣು ಮತ್ತೇನೇನೋ ವಿಗ್ರಹಗಳು, ಗ್ರಂಥಗಳು, ಸೂಫಿ ಗ್ರಂಥಗಳು, ನಾವೆಲ್ಲರೂ ಒಂದು ಕಾಲದಲ್ಲಿ ಚೆನ್ನಾಗಿದ್ದೆವು' ಎಂದು ಸಾರಿ ಹೇಳುತ್ತಿದ್ದವು.

ಕಾಶ್ಮೀರದಲ್ಲಿ ಏನೇ ಗಲಾಟೆಗಳಿರಲಿ ಟ್ಯೂಲಿಪ್‌ಗಳು ಅರಳುತ್ತವೆ. ಬದುಕಿನ ಆಶಾಕಿರಣವೇ ಅದಲ್ಲವೇ? ನಾನು ಟ್ಯೂಲಿಪ್‌ಗಳ ನೋಡಲು ಹೊರಟೆ. ವಿಲ್ಲೋ ಟ್ರೀಗಳಡಿಯಲ್ಲಿ ಎಲ್ಲಿ ಕುಳಿತರೂ ಬಣ್ಣದ ಲೋಕ. ದೇವರೆಂದೂ ಜಗತ್ತಿಗೆ ಮೋಸ ಮಾಡುವುದಿಲ್ಲ. ನಾವುಗಳೇ ಯಾಕಿಷ್ಟು ಕ್ರೂರವಾಗಿಬಿಟ್ಟವೆ ಎನ್ನುವ ಬೇಸರ. ಆದರೂ ಬಣ್ಣಗಳ ಪ್ರವಾಹವು ಮನಸ್ಸನ್ನು ಮುದಗೊಳಿಸುತ್ತಿತ್ತು.

ಆ ಖಾನಾವಳಿ ಮಾದರಿಯ ಹೋಟೆಲ್‌ನ ಒಳಭಾಗದಲ್ಲಿ ಅಸ್ರಾರ್ ಮತ್ತು ಮೀರ್ ಶಾಫಿ ಕಾಯುತ್ತಿದ್ದರು. ಅಸ್ರಾರ್ ಕಾಶ್ಮೀರ ಆಕಾಶವಾಣಿಯಲ್ಲಿ ಉದ್ಘೋಷಕ. 'ದೀದಿ, ಪಂಡಿತರಿದ್ದಾಗ ಊಟದ ವೈಭವವೇ ಬೇರೆ. ಅವರು ತಯಾರಿಸುತ್ತಿದ್ದ ಖಾದ್ಯಗಳ ಹೆಸರೂ ನಮಗೀಗ ಬಾರವು. ಮುಸ್ಲಿಮರೂ ವೈವಿಧ್ಯಮಯ ಖಾದ್ಯ ಖೀರುಗಳನ್ನು ತಯಾರಿಸುತ್ತಿದ್ದರು. ಆದರೆ ಈಗೇನಿದ್ದರೂ ಚೈನೀಸ್ ಡಿಶ್, ಬೀಫ್. ಇಷ್ಟೇ ಆಗಿವೆ. ಆದ್ದರಿಂದ ನಿಮ್ಗೆ ಇಲ್ಲಿ ಊಟ ಕಷ್ಟವಾಗಿದೆ' ಎನ್ನುತ್ತಿದ್ದ. ಅಶ್ಮುಗಾಂವ್‌ನಲ್ಲಿ ಬೆಳಿಗ್ಗೆಯೇ ಎಲ್ಲರೂ ಬೀಫ್ ಊಟಕ್ಕೆ ಕುಳಿತಾಗ ನನಗೆ ಹಸಿವಿನಿಂದ ಕಣ್ಣು ಕತ್ತಲಾಗಿತ್ತು. ಹೋಟೆಲ್‌ನ ಅಡುಗೆ ಕೋಣೆಗೆ ನುಗ್ಗಿ ಕ್ಯಾರೆಟ್ಟು, ಕೋಸು, ಈರುಳ್ಳಿ ಮೂಲಂಗಿ ಹೆಚ್ಚಿ ಉಪ್ಪು ಸುರಿದು ಹೊಟ್ಟೆತುಂಬಿಸಿಕೊಂಡಿದ್ದೆ.

ಪಂಡಿತರ ಬಗ್ಗೆ ಅಸ್ರಾರ್ ಹೇಳಿದ್ದನ್ನು ಕೇಳಿದ ನಾನು ಕಾಶ್ಮೀರದಿಂದ ಸೀದಾ ಜಮ್ಮುವಿನಲ್ಲಿರುವ ಪಂಡಿತರ ಪುನರ್ವಸತಿ ಟೆಂಟ್‌ಗಳನ್ನು ಹೊಕ್ಕೆ. ಕಾಶ್ಮೀರದ ಗತವೈಭವದ ಕತೆಗಳೂ, ಕರುಣಾಜನಕ ಕತೆಗಳೂ, ಅಷ್ಟೇ ಏಕೆ ಇಡೀ ಮನುಷ್ಯತ್ವವೇ ತಲೆತಗ್ಗಿಸಬೇಕಾದ ಕತೆಗಳೂ ಆ ಕಿಷ್ಕಿಂಧೆಯಂತಹ ಟೆಂಟ್‌ಗಳಲ್ಲಿದ್ದವು. ಕಮ್ಯೂನಿಸಂ ಚಿಂತನೆಯ ಕೆ.ಎಲ್. ಕೌಲ್ ಭಾರತದ ಸೆಕ್ಯುಲರಿಸ್ಟ್‌ಗಳು ಪಂಡಿತರ ಬಗ್ಗೆ ನಡೆದುಕೊಂಡ ರೀತಿಯನ್ನು ವಿವರಿಸಿದರು. ಆರ್.ಎಲ್. ಶಾಂತ್ ಅವರು ರಾಶಿರಾಶಿಯಾಗಿ ಅಸ್ತವ್ಯಸ್ತವಾಗಿ ಹರಡಿಕೊಂಡ ಪುಸ್ತಕಗಳ ನಡುವೆ ಹುಚ್ಚರಂತೆಯೇ ಕುಳಿತಿದ್ದರು. 'ಅಂದು ರಾತ್ರಿ ನಾವೆಲ್ಲ ಊಟ ಮಾಡಿ ಕುಳಿತಿದ್ದೆವು. ಮಸೀದಿಯ ಮೈಕುಗಳು ಬೊಬ್ಬಿಟ್ಟವು, ಪಂಡಿತರೇ ತಕ್ಷಣದಿಂದ ಹೊರಡಿ, ಇಲ್ಲವಾದರೆ ನಾಳೆಯಿಂದಲೇ ಸಾಮೂಹಿಕ ಕೊಲೆ ಆರಂಭಿಸುತ್ತೇವೆ ಎಂದು ಬೊಬ್ಬಿಟ್ಟರು. ನಾವು ಹೇಗೆ ಓಡಿ ಬಂದೆವು ಎಂಬುದನ್ನು ನಾನು ಬರೆಯಲಾರೆ. ಕೈಗಳು ನಡುಗುತ್ತವೆ ನೀವೇ ನೋಡಿ. ದಾರಿಯಲ್ಲಿ ಎದುರಾದವರು ನಮ್ಮ ಹೆಂಗಸರ ಸಿಗಿದು ಹಾಕಿದರು. ಅದನ್ನು ಈ ಕೈಯಲ್ಲಿ ಕತೆ ಬರೆಯಲಾಗುತ್ತದೆಯೇ' ಎಂದು ಮೈಮೇಲೆ ದೆವ್ವ ಬಂದಂತೆ ಮಾತನಾಡಿ ಸುಸ್ತಾದರು. ಮಾತನಾಡುತ್ತಲೇ ಸುಮಾರು 79 ವರ್ಷದ ಆ ಅಜ್ಜ ಬಿಕ್ಕಿ ಬಿಕ್ಕಿ ಅತ್ತರು.

ಅವಳು ಮದುಮಗಳು, ಗರಗಸದಲ್ಲಿ ಸಿಗಿದು ಹಾಕಿದರು. ಮಕ್ಕಳು ಎಲ್ಲಿ ಹೋದವೋ ಏನೋ? ಬೆಳೆದ ಮಗ ಮರದಲ್ಲಿ ನೇತಾಡುತ್ತಿದ್ದ. ಹೀಗೆ ಒಂದೊಂದು ಕೋಣೆಯಲ್ಲಿ ಒಂದೊಂದು ಕುಟುಂಬ. ಅಲ್ಲಿ ನೂರು ನೂರು ಕತೆಗಳು. 'ತಂಪಾದ ಕಾಶ್ಮೀರದಿಂದ ಬಿಸಿಯಾದ ಊರು ಜಮ್ಮುವಿಗೆ ಬರುವಾಗ ಹಾವುಗಳದ್ದೇ ಕಾಟ. ಸತ್ತವರು ಹೋದರು. ಇದ್ದವರು ಸಾಯುವುದನ್ನು ನೋಡಲಾರದೆ, ಔಷಧ ಇಲ್ಲದೆ, ಕಾಡುಮೇಡಿನಲ್ಲಿಯೇ ದಾರಿಯಲ್ಲಿ ತೀರಿಹೋದವರ ಹೆಣಗಳ ಅಲ್ಲೇ ಹುಗಿದು ಬಂದೆವು.

ಅಪ್ಪ ಅಮ್ಮನನ್ನು ಕೊಚ್ಚಿಹಾಕುವುದನ್ನು ಮರದ ಮರೆಯಲ್ಲಿ ನಿಂತು ನೋಡಿದ ಆ ಪುಟ್ಟ ಬಾಲಕಿಗೆ ಈಗ ಮದುವೆ ವಯಸ್ಸು...'

ನಾನು ನೋಟ್ಸ್ ಮಾಡಿಕೊಳ್ಳುವುದನ್ನು ನಿಲ್ಲಿಸಿದೆ.

ಪಂಡಿತರ ಪರವಾಗಿ ವಿಶ್ವಸಂಸ್ಥೆಯ ಬಾಗಿಲು ಬಡಿದ ಕೆ.ಎನ್. ಪಂಡಿತ, ಮತ್ತೆ ತಮ್ಮೂರಿಗೆ ಮರಳುವ ಕನಸಿನೊಂದಿಗೆ 'ಪನೂನ್ ಕಶ್ಮೀರ್' ಸಂಘಟನೆ ಕಟ್ಟಿಕೊಂಡ ಅಗ್ನಿಶೇಖರ್, ಲೇಖಕಿ ಕೇಮಾಕೌಲ್ ಎಲ್ಲರೂ ಸಾವಿರಾರು ಪ್ರಶ್ನೆಗಳನ್ನು ಹೊತ್ತುಕೊಂಡೇ ಬಾಳುವೆ ಮಾಡುತ್ತಿದ್ದರು. ಪ್ರಶ್ನೆಗಳನ್ನು ಮೀರಿ ಮಕ್ಕಳು ಬೆಳೆದಿದ್ದರು. ಕಶ್ಮೀರಿತನವನ್ನು, ಪರಂಪರೆಯನ್ನು ಅವರಿಗೆ ಕಲಿಸಲು, ತೋರಿಸಲು ಆಗಲಿಲ್ಲವಲ್ಲ ಎಂಬ ನೋವು ಹಿರಿಯರಿಗೆ.

'ತಾಯ್ನಾಡಿನಲ್ಲಿಯೇ ನಾವು 'ರೆಫ್ಯೂಜಿ'ಗಳು. ಬೇಸರ ಮಾಡಿಕೊಳ್ಳಬೇಡಿ, ಎಲ್ಲರೂ ಸೀದಾ ಕಾಶ್ಮೀರಕ್ಕೆ ತೆರಳಿಯೇ ಅಧ್ಯಯನ ಮಾಡುತ್ತಾರೆ. ಅಲ್ಲಿ ಹಣವಿದೆ, ಸೌಂದರ್ಯವಿದೆ. ಜಮ್ಮುವಿಗೆ ಬಂದರೆ ಕಣ್ಣೀರ ಕತೆಯಿದೆ. ಅತ್ತ ಲಡಾಕ್‌ಗೆ ಹೋದರೂ ಕಣ್ಣೀರ ಕತೆಯಿದೆ. ಆದರೆ ಪತ್ರಕರ್ತರಿಗಾಗಲೀ ಬರಹಗಾರರಿಗಾಗಲೀ ಅವು ಬೇಡವಾಗಿವೆ...' ಎಂದು ಅಗ್ನಿಶೇಖರ್ ಹೇಳಿದರು. ಅವರು ಕಾಶ್ಮೀರದ ಸುಂಭಲ್ ಎಂಬ ಊರಿನಿಂದ ಓಡಿಬಂದವರು. ಜಮ್ಮುವಿನಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಮನೆಗೆ ಸುಂಭಲ್ ಎಂದೇ ಹೆಸರಿಟ್ಟಿದ್ದಾರೆ.

***

ಒಂಬತ್ತು ವರ್ಷಗಳ ಹಿಂದಿನ ಕಾಶ್ಮೀರ ಪ್ರವಾಸದ ನೆನಪುಗಳು ಈಗಲೂ ಅಚ್ಚೊತ್ತಿದ್ದಂತಿವೆ. 370ನೇ ವಿಧಿ ರದ್ದಾಗಿರುವ ಕಾರಣದಿಂದಾಗಿ ಜಮ್ಮು–ಕಾಶ್ಮೀರಕ್ಕಿದ್ದ ವಿಶೇಷ ಸ್ಥಾನಮಾನ ಇಲ್ಲವಾಗಿದೆ. ಒಂದೆಡೆ ಆತಂಕ, ಇನ್ನೊಂದೆಡೆ ಅಭಿವೃದ್ಧಿಯ ನಿರೀಕ್ಷೆ – ಕಾಶ್ಮೀರ ಕೊಳ್ಳದಲ್ಲೀಗ ಸಂಕ್ರಮಣ ಕಾಲ. ಈಗ ಮತ್ತೊಮ್ಮೆ ಕಾಶ್ಮೀರಕ್ಕೆ ಭೇಟಿ ಕೊಟ್ಟರೆ ಜೀಲಾನಿ, ಬಶೀರ್, ಶಬ್ನಂ ಕಯ್ಯೂಮ್, ರೆಹಮಾನ್ ರಾಹಿ, ಶಾದ್ ರಂಜಾನ್, ಅಸ್ರಾರ್, ಮೀರ್... ಇವರೆಲ್ಲ ಹೇಗಿದ್ದಿರಬಹುದು? ಏನು ಹೇಳಬಹುದು?

ಕಾಶ್ಮೀರ ಕಾಡುತ್ತದೆ; ನೋಡಿದವರನ್ನೂ ನೋಡದವರನ್ನೂ!

ಪ್ರತಿಕ್ರಿಯಿಸಿ: ಟೀಕೆ–ಟಿಪ್ಪಣಿಗಳಿಗೆ ಸ್ವಾಗತ.
ಇ–ಮೇಲ್: feedback@sudha.co.in